**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.463/2018**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ.

-ಃಃ ವಿರುದ್ಧ ಃಃ-

ಆರೋಪಿ ನಂ.1) ಮಹಾದೇವಿ ಗಂಡ ತಿಪ್ಪಣ್ಣ ಭಜಂತ್ರಿ,
ವಃ 50 ವರ್ಷ, ಉಃ ಕೂಲಿ ಕೆಲಸ,
ಸಾಃ ಬೆನಕನಳ್ಳಿ ಗ್ರಾಮ, ತಾಃ ಸೇಡಂ.

2) ಸಾಬಮ್ಮ ಗಂಡ ನಾಗಪ್ಪ ಭಜಂತ್ರಿ,
ವಃ 30 ವರ್ಷ, ಉಃ ಕೂಲಿ ಕೆಲಸ,
ಸಾಃ ಕೋಳಿವಾಡ ದೊಡ್ಡ ಅಗಸಿ, ಸೇಡಂ.

----

**ದೋ ಷಾ ರೋ ಪ ಣೆ**

ನಾನು ಶ್ರೀ ಸುನೀಲ್.ಎಸ್.ತಳವಾರ, ಬಿ.ಎ.ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿನ್ನ ಮೇಲೆ ಹೊರಿಸುವ ಆರೋಪವೇನೆಂದರೆ,

ಆರೋಪಿತರಾದ ನೀವು ದಿನಾಂಕ 06-04-2018 ರಂದು ಮಧ್ಯಾಹ್ನ 3.00 ಗಂಟೆ ಸುಮಾರಿಗೆ ಸೇಡಂ ಪೊಲೀಸ್ ಠಾಣಾ ಹದ್ದಿಯಲ್ಲಿರುವ ಸೇಡಂ ಪಟ್ಟಣದ ದೊಡ್ಡ ಅಗಸಿ ಏರಿಯಾದಲ್ಲಿನ ಸಾರ್ವಜನಿಕ ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮವಾಗಿ ಕಲಬೆರಕೆ ಸೇಂದಿಯನ್ನು ಯಾವುದೇ ಪರವಾನಿಗೆ ಇಲ್ಲದೇ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದಾಗ, ಚಾಸಾ-1, 4 ರಿಂದ 7 ರವರು ಕೂಡಿಕೊಂಡು, ಚಾಸಾ-1 ಮತ್ತು 2 ನೇದ್ದವರ ಸಮಕ್ಷಮದಲ್ಲಿ ದಾಳಿ ಮಾಡಿ, ನಿಮ್ಮ ವಶದಲ್ಲಿದ್ದ ಒಂದು ಲೀಟರಿನ ಒಟ್ಟು 24 ಲೀಟರ್ ಪಾಕೆಟಿನ ಕಲಬೆರಕೆ ಸೇಂದಿಯನ್ನು ವಶಪಡಿಸಿಕೊಂಡಿದ್ದು, ಅಲ್ಲದೇ ಸದರಿ ಕಲಬೆರಕೆ ಸಾರಾಯಿ ಮತ್ತು ಸೇಂದಿ ಸೇವನೆಯಿಂದ ಮಾನವ ಜೀವಕ್ಕೆ ಹಾನಿಯಾಗುತ್ತದೆಂದು ಗೊತ್ತಿದ್ದರೂ ಸಹ ಸಾರ್ವಜನಿಕರಿಗೆ ಕಲಬೆರಕೆ ಸೇಂದಿ ಮಾರಾಟ ಮಾಡಲು ಸಾಗಾಣಿಕೆ ಮಾಡುತ್ತಿದ್ದರಿಂದ, ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ಹಾಗೂ ಭಾ.ದಂ.ಸಂ. 273 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

Sd/-

ದಿನಾಂಕಃ 03-12-2021 ಪ್ರ.ದ.ನ್ಯಾ.ದಂ. ಸೇಡಂ.